> ಎರಡು ವಾರಕ್ಕಿಂತ ಹೆಚ್ಚು ಕೆಮ್ಮು, ಸಂಜೆ ವೇಳೆ ಜ್ವರ, ಕೆಮ್ಮಿದಾಗ ಎದೆ ನೋವು, ಕಫದಲ್ಲಿ ರಕ್ತ ಬೀಳುವುದು, ಹಸಿವಾಗದಿರುವುದು ಮತ್ತು ತೂಕ ಕಡಿಮೆಯಾಗುವುದು. ಇವುಗಳೆಲ್ಲ ಕ್ಷಯ ರೋಗದ ಲಕ್ಷಣಗಳಾಗಿರಬಹುದು. ಈ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ಸಮೀಪದ ಆಸ್ಪತ್ರೆ/ಕ್ಲಿನಿಕ್‌ಗಳನ್ನು ಸಂಪರ್ಕಿಸಿ ತಪಾಸಣೆ ಮಾಡಿಸಿಕೊಳ್ಳಬೇಕು. ಸೂಕ್ತ ಸಮಯದಲ್ಲಿ ಸರಿಯಾದ ಚಿಕಿತ್ಸೆ ಪಡೆಯುವುದರಿಂದ ಕ್ಷಯರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದು. ಸಮರ್ಪಕ ಚಿಕಿತ್ಸೆಯಿಂದ ಕ್ಷಯರೋಗ ಪೂರ್ಣ ಪ್ರಮಾಣದಲ್ಲಿ ಗುಣವಾಗುವುದರಿಂದ ರೋಗಿಗಳು ಆತಂಕಪಡುವ ಅಗತ್ಯವಿಲ್ಲ.
>
> **ಡಾ. ಎಂ. ಮಂಜುಳಾ**
>
> ಜಂಟಿ ನಿರ್ದೇಶಕರು (ಕ್ಷಯ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ



## ಕ್ಷಯರೋಗಕ್ಕೆ ಚಿಕಿತ್ಸೆ:

ರೋಗಲಕ್ಷಣಗಳು ಹಾಗೂ ತೀವ್ರತೆಗೆ ಸಂಬಂಧಿಸಿದಂತೆ ಚಿಕಿತ್ಸೆಯ ಕಾಲಾವಧಿಯೂ ಬದಲಾಗುವುದು. ಹೊಸ ಕ್ಷಯ ರೋಗಿಗಳಿಗೆ (ಶ್ವಾಸಕೋಶದ ಕ್ಷಯ ಹಾಗೂ ಶ್ವಾಸಕೋಶೇತರ ಕ್ಷಯ ಪ್ರಥಮ ಬಾರಿಗೆ ಕ್ಷಯರೋಗ ಧೃಡಪಟ್ಟವರಿಗೆ) ಚಿಕಿತ್ಸಾ ಅವಧಿ 6 ತಿಂಗಳು. ಈ ಹಿಂದೆ ಕ್ಷಯ ರೋಗ ಚಿಕಿತ್ಸೆ ಪಡೆದವರು (ಶ್ವಾಸಕೋಶದ ಕ್ಷಯ ಚಿಕಿತ್ಸೆ ಅಪೂರ್ಣಗೊಂಡವರು, ಕ್ಷಯರೋಗದ ಚಿಕಿತ್ಸೆಯನ್ನು ಅರ್ಧಕ್ಕೆ ಮೊಟಕುಗೊಳಿಸಿದವರು, ಹಾಗೂ ಚಿಕಿತ್ಸೆ ಫಲಕಾರಿಯಾಗದೆ Positive ಬಂದವರು) 8 ತಿಂಗಳು ಚಿಕಿತ್ಸೆ ಪಡೆಯಬೇಕಾಗುವುದು.

Drug Resistant TB, Refamcine Resistant ಬಂದವರು ಅಥವಾ Isoniazid Resistant ಬಂದವರಿಗೆ ಚಿಕಿತ್ಸಾ ಅವಧಿ 9ರಿಂದ 11 ತಿಂಗಳು. ಕ್ಷಯರೋಗ ಉಲ್ಬಣಾವಸ್ಥೆಗೆ ತಲುಪಿದವರಿಗೆ (XDR) ಚಿಕಿತ್ಸಾ ಅವಧಿ 27ರಿಂದ 30 ತಿಂಗಳು.

## ಕ್ಷಯರೋಗದ ನಿಯಂತ್ರಣಕ್ಕೆ ಸರ್ಕಾರದ ಕ್ರಮಗಳು:

- ಕರ್ನಾಟಕದಲ್ಲಿ ಪರಿಷ್ಕೃತ 'ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ' 1997ರಿಂದಲೂ ಜಾರಿಯಲ್ಲಿದೆ.
- ಕ್ಷಯರೋಗಕ್ಕೆ ಉಚಿತ ಔಷಧಿಗಳ ವಿತರಣೆ ಮಾಡಲಾಗುತ್ತಿದೆ. ನೇರ ನಿಗಾವಣೆ ಮೂಲಕ ರೋಗಿಗೆ ಕ್ಷಯರೋಗ ಮಾತ್ರೆಗಳ ವಿತರಣೆ.
- CBNAAT ಯಂತ್ರದ ಮೂಲಕ ಕ್ಷಯರೋಗವನ್ನು ಮೂಲದಲ್ಲೇ ಗುರುತಿಸುವುದು ಹಾಗೂ ಚಿಕಿತ್ಸೆ ನೀಡುವುದು.
- DRTB ಕೇಂದ್ರದಲ್ಲಿ Drug Resistant TB ರೋಗಿಗಳನ್ನು ದಾಖಲು ಮಾಡಿಕೊಂಡು ಚಿಕಿತ್ಸೆ ನೀಡುವುದು.
- ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನ (ACF) ಕಾರ್ಯಕ್ರಮದ ಮುಖಾಂತರ ನೂತನ ರೋಗಿಗಳನ್ನು ಗುಡ್ಡಗಾಡುಸಹಿತ ಹಳ್ಳಿ ಹಾಗೂ ನಗರ ಪ್ರದೇಶಗಳಲ್ಲಿ ಗುರುತಿಸಿ ಚಿಕಿತ್ಸೆ ಒದಗಿಸುವುದು.
- ಕ್ಷಯರೋಗಿಗಳಿಗೆ ಚಿಕಿತ್ಸೆ ಮುಗಿಯುವವರೆಗೂ ಪೌಷ್ಟಿಕಾಂಶ ಆಹಾರ ಸೇವನೆಗಾಗಿ ಪ್ರತೀ ಮಾಹೆಯಲ್ಲಿ 500 ರೂಪಾಯಿಗಳನ್ನು ರೋಗಿಯ ಬ್ಯಾಂಕ್ ಖಾತೆಗೆ PFMS ಮುಖಾಂತರ ನೇರವಾಗಿ ವರ್ಗಾಯಿಸಲಾಗುವುದು.
- ಕ್ಷಯರೋಗಿಗಳಿಗೆ ಚಿಕಿತ್ಸೆ ಒದಗಿಸುವ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಸ್ವಯಂ ಸೇವಾ ಸಂಸ್ಥೆ ಮತ್ತು ಮಹಿಳಾ ಸ್ವ–ಸಹಾಯ ಸಂಘಗಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗುವುದು.
- ಖಾಸಗಿ ವೈದ್ಯರು ಮತ್ತು ಆಸ್ಪತ್ರೆಗಳು ಕ್ಷಯ ರೋಗವನ್ನು ಪತ್ತೆ ಮಾಡಿ ಸರ್ಕಾರಕ್ಕೆ ವರದಿ ಮಾಡುವುದಕ್ಕೆ ರೂ. 500 ಹಾಗೂ ಚಿಕಿತ್ಸೆಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಮಾಡಿದಲ್ಲಿ ರೂ. 500 ಪ್ರೋತ್ಸಾಹಧನವನ್ನು ನೀಡಲಾಗುತ್ತದೆ.
- ಖಾಸಗಿ ಔಷಧ ಅಂಗಡಿಗಳಲ್ಲಿ ಕ್ಷಯರೋಗಕ್ಕೆ ಸಂಬಂಧಿಸಿದ ಔಷಧಗಳನ್ನು ಕೌಂಟರ್ ಮಾರಾಟ ನಿಷೇಧಿಸಲಾಗಿದೆ. ಮತ್ತು ಹೆಚ್1 ನೋಂದಣಿ ಪುಸ್ತಕವನ್ನು ಕಡ್ಡಾಯವಾಗಿ ಹೊಂದಿರಬೇಕು.

